<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>

ದಿಃ 05.04.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-31 Pw-23

| | | |
|---|---|---|
| ಹೆಸರು | ಃ | ನಾಗರಾಜ ಕೆ |
| ತಂದೆಯ ಹೆಸರು | ಃ | ಲೇ. ಕೆಂಪಯ್ಯ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಹೆಚ್‌ಸಿ ನಂಬರ್. 407<br>ಮಾಗಡಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಮಾಗಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಸನ್ 2015ರಿಂದ 2019ರವರೆಗೆ ನಾನು ಕುದೂರು ಪೊಲೀಸ್ ಠಾಣೆಯಲ್ಲಿ ಪಿಸಿ ನಂಬರ್ 374 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ಅದೇ ಸಮಯದಲ್ಲಿ ನಾನು ಮಾಗಡಿ ಸಿಪಿಐರವರ ಕಚೇರಿಯಲ್ಲಿಯೂ ಸಹ ಕೆಲಸ ಮಾಡುತ್ತಿದ್ದೆನು.

3. ದಿಃ18.10.2016ರಂದು ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ 1.30ರಿಂದ 2.30ರವರೆಗೆ 1ನೇ ಮತ್ತು 2ನೇ ಆರೋಪಿತರ ತೋರಿಕೆಯ ಮೇರೆಗೆ ಘಟನಾ ಸ್ಥಳದ ದೇವಮಾಚೋಹಳ್ಳಿ ಗ್ರಾಮದ ಚಿದಾನಂದ್ ಎಂಬಾತನ ಜಮೀನಿನಲ್ಲಿ

ಮತ್ತು ಚಿಕ್ಕಣ್ಣ ಎಂಬಾತನ ಮನೆಯ ಮುಂದಿನ ರಸ್ತೆಯಲ್ಲಿ ಭೇಟಿ ನೀಡಿ ಚಾಸಾ.35 ಇವರು ಒಂದು ಸ್ಥಳ ಪಂಚನಾಮೆಯನ್ನು ಮಾಡಿದ್ದು, ಅದನ್ನು ಚಾಸಾ.35 ಇವರ ಉಕ್ತಲೇಖನದಂತೆ ನಾನು ಬರೆದಿರುತ್ತೇನೆ.

4. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.5(ಸಿ) ಎಂದು ಗುರುತಿಸಲಾಯಿತು.

5. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರಲ್ಲಿನ 1ನೇ ಆರೋಪಿತನನ್ನು ನೋಡಿ ಗುರುತಿಸುತ್ತಿದ್ದೇನೆ.

6. 2ನೇ ಆರೋಪಿತನನ್ನು ನೋಡಿ ಈಗ ಗುರುತಿಸಲು ಆಗುವುದಿಲ್ಲ.

7. ನಂತರ, ಅದೇ ದಿನ 1ನೇ ಮತ್ತು 2ನೇ ಆರೋಪಿತರು, ಕೃತ್ಯ ಮಾಡಲು ಒಳಸಂಚು ರೂಪಿಸಿದ ಸ್ಥಳ ಎಂದು ನಾಗನಹಳ್ಳಿ ಮತ್ತು ತಿಪ್ಪಗೊಂಡನಹಳ್ಳಿ ಡ್ಯಾಂಗೆ ಹೋಗುವ ರಸ್ತೆಯಲ್ಲಿ ಕರೆದುಕೊಂಡು ಹೋಗಿ ತೋರಿಸಿದರ ಮೇರೆಗೆ, ಚಾಸಾ.35 ಇವರು ಮಧ್ಯಾಹ್ನ 2.45ರಿಂದ 3.15ರವರೆಗೆ ಒಂದು ಸ್ಥಳ ಪಂಚನಾಮೆಯನ್ನು ಮಾಡಿ, ಅದನ್ನು ಅವರ ಉಕ್ತಲೇಖನದಂತೆ ನಾನು ಬರೆದಿರುತ್ತೇನೆ.

8. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.6(ಸಿ) ಎಂದು ಗುರುತಿಸಲಾಯಿತು.

9. ನಂತರ, ದಿಃ19.10.2016 ರಂದು ಮಧ್ಯಾಹ್ನ 3.30 ರಿಂದ ಸಾಯಂಕಾಲ 5.00 ಗಂಟೆವರೆಗೆ ಆರೋಪಿ ನಂಬರ್ 1 ರಿಂದ 4, 6 ರಿಂದ 8 ಇವರ ತೋರಿಕೆಯ ಮೇರೆಗೆ ಚಾಸಾ.35 ಇವರು ನನ್ನನ್ನೂ ಸಹ ಕರೆದುಕೊಂಡು, ಆರೋಪಿತರು ಸಂಚು ರೂಪಿಸಿರುವ ಜಾಗ, ಮತ್ತು ಕೃತ್ಯಕ್ಕೆ ಉಪಯೋಗಿಸಿದ ವಾಹನಗಳು ಮತ್ತು ಮಾರಕಾಸ್ತ್ರಗಳನ್ನು ಇಟ್ಟಿರುವ ಜಾಗವಾದ ಬೆಂಗಳೂರು ನಗರದ ಕಾಮಾಕ್ಷಿಪಾಳ್ಯದ ವೃಷಭಾವತಿನಗರದಲ್ಲಿನ ಶ್ರೀ ಲಕ್ಷ್ಮೀವಲ್ಲಭ ಕಲ್ಯಾಣ ಮಂಟಪದ ಹಿಂಬದಿಯಲ್ಲಿನ ರಸ್ತೆಗೆ ಭೇಟಿ ನೀಡಿ, ಒಂದು ವಿವರವಾದ ಪಂಚನಾಮೆಯನ್ನು ಮಾಡಿದ್ದು, ಅದನ್ನು ಚಾಸಾ.35 ಇವರ ಉಕ್ತಲೇಖನದಂತೆ ಬರೆದಿರುತ್ತೇನೆ.

10. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.16 ಎಂದು

ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.16(ಸಿ) ಎಂದು ಗುರುತಿಸಲಾಯಿತು.

11. ನಿ.ಪಿ.16ರಡಿಯಲ್ಲಿ ಒಂದು ಮಾರುತಿ 800 ಕಾರ್ ಮತ್ತು ಅದರಲ್ಲಿದ್ದ 4 ಲಾಂಗ್‌ಗಳನ್ನು, ಮತ್ತು ಒಂದು ಪಲ್ಸರ್ ದ್ವಿಚಕ್ರ ವಾಹನ ಹಾಗೂ ಒಂದು ಹೊಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

12. ಸದರಿ 4 ಲಾಂಗ್‌ಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.5ರಿಂದ 8 ಎಂದು ಗುರುತಿಸಿದ್ದು ಇರುತ್ತವೆ.

13. ಸದರಿ ಅಮಾನತ್ತುಪಡಿಸಿಕೊಂಡಿದ್ದ ಮಾರುತಿ 800 ಕಾರ್, ಒಂದು ಪಲ್ಸರ್ ಹಾಗೂ ಒಂದು ಹೊಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನಗಳನ್ನು ನೋಡಿದಲ್ಲಿ ನಾನು ಗುರುತಿಸಬಲ್ಲೆನು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ವಾಹನಗಳ ಫೋಟೋಗಳು ಕಡತದಲ್ಲಿ ಲಭ್ಯವಿರದೇ ಇದ್ದುದ್ದರಿಂದ ಅವುಗಳನ್ನು ತರಿಸಿಕೊಂಡು ಹಾಜರುಪಡಿಸಿ, ಪ್ರಸ್ತುತ ಸಾಕ್ಷಿಯೊಂದಿಗೆ ಗುರುತಿಸಿಕೊಳ್ಳಲು ಮತ್ತು ಮುಂದಿನ ಮುಖ್ಯ ವಿಚಾರಣೆಯನ್ನು ಮಾಡಲು

ಸಮಯಾವಕಾಶ ಕೇಳಿರುತ್ತಾರೆ. ಆಲಿಸಲಾಯಿತು. ನ್ಯಾಯತಾದೃಷ್ಟಿಯಿಂದ ಸಮಯವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಗಿರುತ್ತದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.